O.S. NO. 70/2023
PW -1 .
Dated 19-06-2026.

ಸಾಕ್ಷಿಯನ್ನು ಈ ದಿನ ದಿನಾಂಕ 19 -06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 7 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಿ ಎಚ್ ವಕೀಲರಿಂದಃ

ಆಸ್ತಿ ಕಾಗದ ನೊಂದ ಆಗಿರುವುದಿಲ್ಲ. ನನ್ನ ತಂದೆ ಮತ್ತು ಸಹೊದರರು ಸೇರಿ 20 ಗುಂಟೆ ಜಮಿನು ದಿನಾಂಕ 23-01-1995 ರಂದು ನೊಂದಾಯಿತ ಖರೀದಿ ಪತ್ರ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನನ್ನ ಅಜ್ಜಿ ಚನ್ನಮ್ಮ ಹಾಗೂ 1 ನೇ ಪ್ರತಿವಾದಿ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ 10-01-1995 ಇರುತ್ತದೆ. ಸದರಿ ಖರೀದಿ ಪತ್ರ ಆಗುವ ಸಮಯದಲ್ಲಿ ನಾನು ಎಷ್ಟು ವಯಸ್ಸಿನವಳು ಇದ್ದೆ ಎಂದು ಮಾಹಿತಿ ಇರುವುದಿಲ್ಲ. ಸದರಿ ಮಾರಾಟ ಮಾಡುವಾಗ ನಮ್ಮ ಕುಟುಂಬಕ್ಕೆ ಯಾವ ಆರ್ಥಿಕ ಅಡಚಣೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಕುಟುಂಬದಲ್ಲಿ ನನ್ನ ಅಜ್ಜಿಯ ಚಿಕಿತ್ಸೆ ಖರ್ಚು ಮತ್ತು ಕುಟುಂಬದ ಆರ್ಥಿಕ ಅಡಚಣೆಗೊಸ್ಕರ ಅಂದರೆ ನನ್ನ ಜನನದ ಖರ್ಚಿಗೊಸ್ಕರ 7 ನೇ ಪ್ರತಿವಾದಿ ಗೆ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸಹೊದರರು ಮತ್ತು ನನ್ನ ಅಜ್ಜಿ 7ನೇ ಪ್ರತಿವಾದಿಗೆ ಆಸ್ತಿ ಖರೀದಿ ಮಾಡಲು ಒತ್ತಾಯಿಸಿ ಖರೀದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಆಸ್ತಿಯನ್ನು ಕಾಯ್ದೆ ಬದ್ದವಾಗಿ ಖರೀದಿ

ಮಾಡಿದ್ದರು ಸಹ ಆತ ಖರೀದಿ ಮಾಡಿದ ಆಸ್ತಿ ಎತ್ತಿ ಹಾಕಬೇಕೆಂಂದು ನಾನು , ನನ್ನ ತಂದೆ ತಾಯಿ ಮತ್ತು ಸಹೊದರರೊಂದಿಗೆ ಮಿಲಾಪಿ ಆಗಿ ನಾವು ಇದೊಂದು ಖೊಟ್ಟಿ ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ದಾವಾ ಹಾಕುವ ಪೂರ್ವದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲು ಬರುತ್ತಾ ಎಂದರೆ ಇಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಹೀಗೆ ಬೇರೆ ಆಸ್ತಿಗಳು ಇದ್ದರು ಸಹ ಉದ್ದೇಶ ಪೂರ್ವಕವಾಗಿ ಅವುಗಳನ್ನು ಬಿಟ್ಟು ಕೇವಲ ದಾವಾ ಆಸ್ತಿಗಳ ಮೇಲೆ ಖೊಟ್ಟಿ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನನ್ನ ಅಜ್ಜ ಮತ್ತು ನನ್ನ ತಂದೆ ಸೇರಿ ಸೊಮನ್ನ ಎಂಬುವವರಿಗೆ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಮೊದಲಿನ ಆಸ್ತಿ ಮಾರಿರಬಹುದು ಎಂದು ನುಡಿದಿರುತ್ತಾರೆ. ಸದರಿ ಸೊಮನ್ನ ರವರಿಗೆ ಆಸ್ತಿ ಮಾರಾಟ ಮಾಡಿದ ದಾಖಲೆ ನೊಡಿಲ್ಲ. ಪ್ರಸ್ತುತ ದಾವೆಯ 7 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರ ಸಹ ಆತನ ಆಸ್ತಿ ಕಬಳಿಸಬೇಕೆಂದು ಇದೊಂದು ಖೊಟ್ಟಿ ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ಮತ್ತು 2 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

O.S. NO. 70/2023

PW –1 .

Dated 19–06–2026.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.